ಆಗಿರಲಿಲ್ಲ. ಆಕೆ ಶಾಂತಳಾಗಿಯೇ ಇದ್ದಳು. ನಿರ್ಭಾವುಕಳಾಗಿದ್ದಳು. ಯಾವುದೋ ವಿಚಾರದಲ್ಲಿ ಮಗ್ನಳಾಗಿದ್ದಳು. "ಗಣಪುಲೆ, ಒಮ್ಮೆ ನನ್ನನ್ನು ವಿಚಾರಿಸಿದ್ದ. ನಾನು ಪರಿಶುದ್ಧಳಾಗಿದ್ದೇನೆ, ಪವಿತ್ರಳಾಗಿದ್ದೇನೆ, ಎಂಬ ಸತ್ಯ ಸಂಗತಿಯನ್ನೇ ಹೇಳಿದ್ದೆ. ಅಂದರೆ, ಇಲ್ಲಿ ಪವಿತ್ರವಿದ್ದದ್ದು ನನ್ನ ಶರೀರ. ನಿಶಿಕಾಂತ, ದಯವಿಟ್ಟು ನಾವು ಇಲ್ಲಿಗೆ ನಿಲ್ಲಿಸೋಣ. ಇದಕ್ಕಿಂತ ಮುಂದೆ ಹೋಗುವುದು ಬೇಡ." ಅವನು ಸಂತೋಷದಿಂದ ಒಪ್ಪಿಕೊಂಡ. ತನಗೆ ರೇವತಿಯ ಶರೀರದ ಬಗ್ಗೆ ಕಾಮ ವಾಸನೆ ಇದ್ದುದು ಅರಿವಾಗಿ ಮನದ ಮೂಲೆಯಲ್ಲಿ ನೋವಿನ ಗೆರೆ ಮೂಡಿತು. ಹೀಗೆ ಎಂಟು–ಒಂಬತ್ತು ತಿಂಗಳುಗಳು ಜಾರಿದವು. ರೇವತಿ ತವರು ಮನೆಗೆ ಬಂದಿದ್ದಳು. ನಿಶಿಕಾಂತ ಆಕೆಯ ಮನೆಗೆ ಹೋದಾಗ ಏನೊ ಬದಲಾವಣೆ ಕಂಡು ಬಂದಿತು. ವಿವಿಧ ತಿಂಡಿಗಳ ಸುವಾಸನೆ ಘಮ್ಮೆಂದು ಮನೆ ತುಂಬ ಹರಡಿತ್ತು. ರೇವತಿ ಹಸಿರು ಸೀರೆ ಉಟ್ಟುಕೊಂಡು, ತಲೆ ತುಂಬ ಮಲ್ಲಿಗೆ ಹೂವುಗಳನ್ನು ಮುಡಿದುಕೊಂಡು ಓಡಾಡುತ್ತಿದ್ದಳು. ಈ ನಡುವೆ ರೇವತಿ ಮಾತುಕತೆಗೆ ಸಿಕ್ಕಳು. "ಏನಿದೆ ಇವತ್ತು? ನಿಮ್ಮ ಮನೆಯಲ್ಲಿ ಏನೋ ಸಮಾರಂಭವಿದೆ ಎಂದು ಅನಿಸುತ್ತದೆ."

"ನಾನು ಏಳು ತಿಂಗಳ ಗರ್ಭಿಣಿ. ಮನೆಯಲ್ಲಿ ಕುಬುಸದ ಕಾರ್ಯಕ್ರಮವಿದೆ." ಆತನಿಗೆ ಈ ವಿಷಯ ಈಗಾಗಲೇ ತಿಳಿದಿತ್ತು. ಆದರೆ ರೇವತಿಯ ಮುಖದಿಂದ ಕೇಳಿದಾಗ ಕಸಿವಿಸಿಗೊಂಡ. ಆತನ ಕವಿ ಹೃದಯಕ್ಕೆ ಭಾರೀ ಪೆಟ್ಟು ಬಿದ್ದಿತ್ತು. "ಅಂದರೆ ನೀನು ತಾಯಿ ಆಗುವೆ. ನಿಸರ್ಗ ತನ್ನ ಕಾರ್ಯ ನೆರವೇರಿಸಿದ್ದರಿಂದ, ಸ್ತ್ರೀ ಶರೀರ ಅವಸ್ಥಾ ಭೇದ ಸ್ಥಿತಿಗೆ ತಲಪುವುದು ಸ್ವಾಭಾವಿಕ." ನಿಶಿಕಾಂತ ಗಂಭೀರನಾದ. ಆಕೆಯ ಸಮೀಪ ಬಂದು, ತುಸು ಅಳುಕಿನಿಂದಲೇ ಕೇಳಿದ: "ನಿಜ ಹೇಳು, ನನಗೆ ಇದು ವಿಚಿತ್ರವೆನಿಸುತ್ತದೆ. ಗಣಪುಲೆಯ ಜೊತೆಗೆ ಸಂಭೋಗದಲ್ಲಿ ನೀನು ನಿರತಳಾಗಿದ್ದಾಗ..." "ನೀನು ತಿಳಿದುಕೊಂಡಂತೆ, ನಾನು ಅವನ ಜೊತೆ ಕಾಮಕ್ರೀಡೆಯಲ್ಲಿ ಮಗ್ನಳಾಗಿರುವುದಿಲ್ಲ. ಬೇರೆ ಉಪಾಯವಿಲ್ಲದೆ, ನನಗೆ ಆ ಆಟದಲ್ಲಿ ಭಾಗ ವಹಿಸಬೇಕಾಗುತ್ತದೆ. ಆದರೆ ಅದು ತೋರಿಕೆ ಅಷ್ಟೇ. ಹಾಗೆ ನೋಡಿದರೆ ಗಣಪುಲೆಯ ಬಗ್ಗೆ ನನಗೆ ಆಸಕ್ತಿಯೂ ಇಲ್ಲ, ಅನಾಸಕ್ತಿಯೂ ಇಲ್ಲ. ನನ್ನ ಹೃದಯದಲ್ಲಿ ನಿನ್ನ ಬಿಟ್ಟು ಅನ್ಯರಿಗೆ ಸ್ಥಾನವಿಲ್ಲ." ರೇವತಿಯ ಮಾತನಾಡುವ ಶೈಲಿ ಮೊದಲಿನಂತೆ ಇತ್ತು. ಆಕೆ ಮಾತಿನಲ್ಲಿ ಸತ್ಯವೂ ಅಡಗಿತ್ತು. ಆದರೂ ನಿಶಿಕಾಂತನಿಗೆ ಅದೇನೋ ಸಂಶಯದ ಹುಳ ಮನದಲ್ಲಿ ಹೊಕ್ಕಿತ್ತು. ಅದನ್ನು ನುಡಿದು ವ್ಯಕ್ತಪಡಿಸಿದ. ಅವನ ಮಾತು ಕೇಳಿ ರೇವತಿ ನಕ್ಕಳು. "ನೀನು ಹುಚ್ಚನಿದ್ದಿ. ಇದೆಲ್ಲ ಶರೀರದ ಆಟ. ಒಂದು ವೇಳೆ ನನ್ನ ಶರೀರದ ಮೇಲೆ ಬೊಕ್ಕೆ ಆದರೆ ಶರೀರಕ್ಕೆ ಮಾತ್ರ, ಅದರ ನೋವಿನ ಅನುಭವ ಉಂಟಾಗುತ್ತದೆ. ಮನಸ್ಸಿಗೆ ಆಗುವುದಿಲ್ಲವಲ್ಲ, ಹಾಗೆ." ನಿಶಿಕಾಂತನಿಗೆ ಆಕೆಯ ಮಾತು ಸರಿ ಎನಿಸಿತು. ಮಾತನಾಡದೇ ಅಲ್ಲಿಂದ ನಿರ್ಗಮಿಸಿದ. ಆತ ಆಗಾಗ್ಗೆ ಆಕೆಯ ಮನೆಗೆ ಹೋಗುತ್ತಲೇ ಇದ್ದ. ಗರ್ಭವತಿ ಆದುದರಿಂದ ರೇವತಿಯ ಬೆನ್ನು ಸ್ವಲ್ಪ ಬಾಗಿತ್ತು, ತೂಕವೂ ಹೆಚ್ಚಿದ್ದರಿಂದ ಹೈರಾಣ ಆಗಿದ್ದು ಎದ್ದು ಕಾಣುತ್ತಿತ್ತು. ಆದರೂ ಆಕೆ ನಿಶಿಕಾಂತನೊಂದಿಗೆ ಮೊದಲಿನ ಹಾಗೆ ಪ್ರೀತಿಯಿಂದ ಮಾತನಾಡುತ್ತಿದ್ದಳು. ಆಕೆ ಅನುಭವಿಸುತ್ತಿರುವ ನೋವುಗಳನ್ನು ಕಂಡು ನಿಶಿಕಾಂತ ವ್ಯತಿಥನಾಗಿದ್ದ. "ಎಲ್ಲವೂ ವಿಚಿತ್ರವಾಗಿದೆ. ಗಣಪುಲೆಯ ಬೀಜ ನಿನ್ನ ಗರ್ಭದಲ್ಲಿ ಬೆಳೆಯುತ್ತಿದೆ. ಆತನ ಬಗ್ಗೆ ನಿನಗೆ ಲವಲೇಶವೂ ಪ್ರೀತಿ ಇಲ್ಲ. ಆದರೆ ನಿಸರ್ಗ ತನ್ನ ಕರ್ತವ್ಯ ಮಾಡಿಬಿಟ್ಟಿದೆ.'' ನಿಶಿಕಾಂತನ ಮಾತು ಆಕೆಗೆ ವಿನೋದವೆನಿಸಿತು. ಅದರಲ್ಲಿ ಅಡಗಿದ್ದ ಮಗುವಿನ ಮುಗ್ಧತೆ ಕಂಡು ಬಂದಿತು. ನಿಶಿಕಾಂತನೇನು ಅಂತಹ ಚೆಲುವನಲ್ಲ. ಹೇಳಿಕೊಳ್ಳುವಂತಹ ವ್ಯಕ್ತಿತ್ವವೂ ಆತನದಾಗಿರಲಿಲ್ಲ. ಆದರೆ ಆತನ ಮಾತಿನಲ್ಲಿರುವ ಆಕರ್ಷಣೆ ಹಾಗೂ ವೈಚಾರಿಕತೆ ಎಂಥವರನ್ನೂ ಸೆಳೆಯುವಂತಹದು. ರೇವತಿ ಗಂಡು ಮಗುವಿನ